ಮುಂದೇನೆ ಇನ್ನು ಅತ್ತ ಊರ ಕಡೆಗೆ ಹೋಗತಿದ್ದು. ಇವೆಲ್ಲ, ಹಳೆ ಕಥೆ ಬಿಡಿ.' ಉತ್ಸಾಹದ ಮಾತಿಗೆ ಲಗಾಮು ಹಾಕಿದಳು.

'ಇಲ್ಲ, ಹೇಳಿ ಹೇಳಿ ಪದ್ಮಾ. ವೆರಿ ಇಂಟರೆಸ್ಟಿಂಗ್.'

ಹೆಸರು ಕರೆದು ಆತ್ಮೀಯವಾಗಿ ಮಾತನಾಡಿಸಿದ ಗೀತಾಳ ಮಾತಿಗೆ ಪದ್ಮಾ ಉತ್ಸಾಹದಿಂದ ತನ್ನೂರಿನ ಚಿತ್ರವನ್ನು ಇವಳ ತಲೆಯೊಳಗೆ ಬಿಡಿಸಹತ್ತಿದಳು. 'ಇಲ್ಲಿ ತುಂಬಾ ಗೆದ್ದಲು, ಎರಡು ದಿನ ನೀರು ಹರಸೋದು ಬಿಟ್ರೆ ಮೂರನೇ ದಿನಕ್ ಆಗ್ಲೇ ಗೆದ್ದಲು ಹರಡೋದು, ಅದಕ್ಕೆ ಇದನ್ನ ಗೆದ್ಲಹಳ್ಳಿ ಅಂತಿದ್ರು' ಎಂದು ಗೀತಾ ಪಟಕ್ಕನೆ ನೆನೆಸಿಕೊಂಡಳು. 'ಹೌದು ಪದ್ಮಾ, ಹುಲ್ಲಿಗೆ ಫಿರಡಾನ್ ಹಾಕ್ಸಿಲ್ಲಾಂದ್ರೆ ಗೆದ್ದಲು ಹತ್ತೇಬಿಡುತ್ತೆ. ಲಾನಿಗೆ ಮೂರು ತಿಂಗಳಿಗೊಂದ್ಸಾರಿ ಹಾಕ್ತಾ ಇರ್ಬೇಕು, ಅದು ಭಾರೀ ಘಾಟು ಬೇರೆ, ನಿಮಗೊತ್ತಲ್ಲ! ಒಳ್ಳೆ ಗೋಳು...'

'ನೋಡಿ, ಆಗಿನ ಕಾಲದ ನಮ್ಮ ಹಳೆಮರಗಳು ಅಲ್ಲೊಂದು ಇಲ್ಲೊಂದು ಉಳಕಂಡಿದವೆ. ಈ ಮಾವಿನಮರ, ಅಲ್ಲಿ ಆಂಜನೇಯನ ದೇವಸ್ಥಾನದಲ್ಲಿರೊ ದೊಡ್ಡ ಅರಳಿ ಮರ, ಬೇವಿನ ಮರ ಬಿಟ್ರೆ ಇನ್ಯಾವುದೂ ಉಳಿದಿಲ್ಲ ಗೀತಾವ್ರೇ, ಎಲ್ಲ ಮರಗಳ ಕಡದು ಬಿಸಾಕ್ಬುಟ್ರು. ರಸ್ತೆ ಅಕ್ಕಪಕ್ಕ ಈಗಿರೊ ಮರಗಳನ್ನು ನಾವು ನೋಡ ಹಂಗೆ ಹಾಕಿದ್ದು ಈ ಬಡಾವಣೆ ಮಾಡಿದಾಗ, ಬಿಡಿಎದವ್ರೇ ಹಾಕಿದ್ದು ಪಾರ್ಕಲ್ಲಿ, ರಸ್ತೆ ಪಕ್ಕದಲ್ಲಿ. ಏನ್ ಮಾಡಕ್ಕೆ ಇವು? ದನ ಬೆಳದಂಗೆ ಬೆಳಿತವೆ. ಸಣ್ಣ ಗಾಳಿ ಮಳೆಗೂ ಉಳ್ಳಂತವೆ, ಬೇರೆ ದೇಶದವು ಇವು. ನಮ್ಮೂರಿನ ಗಟ್ಟಿ ಮರ ಅಲ್ಲ, ಒಂದು ಮಳೆಗಾಳಿ ಬಂದ್ರೂ ಸಾಕು, ರಸ್ತೇಲಿ ಮರ ಕಟ್ ಮಾಡಿ ತೆಗ್ಯದೇ ಕೆಲ್ಸ ನೋಡಿ ಬೆಳಗೆದ್ದು. ನೀವೇ ನೋಡಿದೀರಲ್ಲ...! ಆ ಪಾರ್ಕಲಿರೋ ಲೋಲಾಕು ಹೂವಿನ ಮರಗಳೂ ಹಂಗೇನೆ, ಬರಿ ಟೊಳ್ಳು' ಎತ್ತರಕ್ಕೆ ರಸ್ತೆ ಬದಿಯಿದ್ದ ಮರಗಳನ್ನ ಗೀತಾ ಕತ್ತುದ್ದ ಮಾಡಿ ನೋಡಿ ಹೌದೆಂದು ತಲೆಕುಣಿಸಿದಳು.

'ಈಗ ದೊಡ್ಡ ಚರಂಡಿ ಇದ್ಯಲ್ಲ ಉದ್ದಕ್ಕೂ, ಆಗ ಅದು ಮಳೆ ನೀರು, ಕೆರೆನೀರು ತುಂಬಿ ತೂಬಿಂದ ಆಚೆಗೆ ಹರಿದು ಹೋಗುತಿದ್ದ ದೊಡ್ಡ ರಾಜಕಾಲುವೆ, ಅದರ ಉದ್ದಕ್ಕೂ ಹುಣಿಸೆತೋಪಿತ್ತು. ನೇರಳೆ ಮರಗಳು ಬೇಕಾದಂತೆ ಇದ್ವು. ಆ ನೀರು ಹೋಗಿ ವೃಷಭಾವತಿ ನದಿಗೆ ಸೇರ್ಕಳದು, ಆಗಿನ ದಿನದಲ್ಲಿ ನೀರು ಥಳಥಳ ಅನ್ನದು, ಬಾಯಾರಿದರೆ ನಾವು ಅದನ್ನ ಕುಡಿತಿದ್ವಿ ಗೊತ್ತಾ? ದೊಡ್ಡ ಮಳೆ ನೀರು ಮಳೆಗಾಲದಲ್ಲಿ ಜೋರಾಗಿ ಹರ್‍ಯೋದು, ಎಷ್ಟೋ ಜನ ದಾಟಾಡಕ್ಕೆ ಹೆದ್ರೋರು, ಬೇಸಿಗೆ ದಿನದಲ್ಲಿ ಸಣ್ಣಗೆ ಒರತೆ ಇದ್ದೇ ಇರದು, ಈಗ ನೋಡಿ... ಕಾಲ್ವೆ ಅನ್ನದು ಗಬ್ಬು ನಾರೋ ಚರಂಡಿ ಆಗೋಯ್ತು. ಜಾಗ ಒತ್ತುವರಿ ಮಾಡಿ ಮನೆ ಕಟ್ಬುಟ್ಟು ಇತ್ತೀಚೆಗೆ ಎಂಥಾ ಫಜೀತಿ ಆಗೈತೆ ಅಂತೀರ! ಹೋದ ನಾಕನೇ ವರ್ಷದಲ್ಲಿ ಒಂದ್ವಾರ ಗಟ್ಟಿ ಮಳೆ ಹಿಡದಿತ್ತಲ್ಲ, ಆಗ ಕಾಲುವೆ ಉಕ್ಕಿ, ಸೇತುವೆ ಮುಳುಗಿ ಮನೆಗೆಲ್ಲ ನೀರು ನುಗ್ಗಿ ಕಡಿಮೆ ಪಾಡಾ! ಕೆಲ್ಸದವ್ರು ಮೂರು ದಿನ ದಾಟಾಡಕ್ಕೆ ಆಗದೆ ಆ ಕಡೆವ್ರು ಆ ಕಡೆಗೇನೆ, ಈ ಕಡೇವ್ರು ಈ ಕಡೆಗೇನೆ, ಈಗ ಬಿಡುವು ಮಾಡಿ, ಚರಂಡಿ ಗೋಡೆ ಎತ್ತಿ, ನೀರು ಉಕ್ಕಿ ಹರಿದಿರಂಗೆ ರಿಪೇರಿ ಆಯ್ತು ಅನ್ನಿ. ನಾವು ನೋಡತಾ ನೋಡತಾನೆ ಗಬ್ಬು ಚರಂಡಿ ಆಗೋಯ್ತಲ್ಲ ಅಂಥ ಹಳ್ಳ! ಗಾಳಿ ಬಂದ್ರೆ ವಾಸನೆ ತಡಕಳ್ಳಕೆ ಆಗಲ್ಲರೀ...' ಗೀತಾಳಿಗೂ ನಿಜವೆನ್ನಿಸಿತು.

'ನಾನು ಒಂದತ್ತು ವರ್ಷದೋಳಿದ್ದಾಗಲೂ ಸೈತ ಈಗ ಬ್ರಿಗೇಡ್ ಅಪಾರ್ಟ್‌ಮೆಂಟ್ ಇರೋ ಜಾಗದಲ್ಲಿ ದೊಡ್ಡ ಕೆರೆ ಇತ್ತು. ಅದರ ತುಂಬ ನೀರೂ ಇತ್ತು. ಆಮೇಲಾಮೇಲೆ ಮುಚ್ಬೋಯ್ತು. ಅದರ ದಂಡೇಲೆ ಜಲಗೇರಮ್ಮನ ದೇವಸ್ಥಾನ ಇತ್ತು. ಈಗಲೂ ಇದ್ಯಲ್ಲ. ಆಗ ಅದು ಒಂದು ಚಿಕ್ಕ ಕಲ್ಲಿನ ಗುಡಿ ಆಗಿತ್ತು. ನಾವು ಬಾಕ್ಯಂಡೋಗಿ ದೀಪ ಹಚ್ಚಿ ಬರ್ತಿದ್ದೊ. ಈಗಲೂ ನಮ್ಮೂರಲ್ಲಿ ದೊಡ್ಡ ಹಬ್ಬ ಆಗುತ್ತೆ. ಆಗ ಪಕ್ಕದಲ್ಲಿರೋ ಶೆಟ್ಟಹಳ್ಳಿಯೋರು, ಭದ್ರಪ್ಪ ಲೇಔಟ್ನಲ್ಲಿರೋ ನಮ್ಮ ನೆಂಟ್ರೆಲ್ಲ ಬಂದು ಸೇರತಾರೆ, ಅದಕ್ಕಾಗೇ ನಮ್ಮ ಗೊಲ್ಲಹಳ್ಳಿನಾ ದೇವಿನಗರ ಅಂತ ಹೊಸ ಹೆಸರಿಕ್ಕಿ ಕೂಗುಬಿಟ್ರು. ಬೋರ್ಡ್ ಹಂಗೇ ಹಾಕಿದಾರೆ. ನಮ್ಮ ಜಲಗೇರಮ್ಮ ಅತಿಯಾಗಿ ನಿಷ್ಠೆ ಕೇಳೋ ದೇವಿ ಗೀತಾವ್ರೆ. ನಾವು ಇವತ್ತಿಗೂ ಕುರಿಕೋಳಿ ಒಪ್ಪುಸ್ಕೊಂಡು ಹಬ್ಬ ಮಾಡತೀವಿ, ಅವಳಿಗೆ ನಡಕಂತೀವಿ, ಒಳ್ಳೇದು ಕೆಟ್ಟದ್ದಕ್ಕೆಲ್ಲ ಹರಸ್ಕಂತೀವಿ...

ಆಗ ದನಮೇಯಿಸೋಕೆ ಬರೋ ನಮ್ಮಜ್ಜಿ ಜೊತೆ ಅಲ್ಲಿದ್ದ ದೊಡ್ಡ ಕೆರೆ ಏರಿ ಮೇಲಿಂದ ಹಾದು ಬಂದು ನಾವು, ನಮ್ಮ ದನಗಳು ಮೇಯೋ ಕೆರೆ ಹಡ್ಲಲ್ಲಿ ಆಟ ಆಡ್ಕಂತಿದ್ವಿ. ಅಲ್ಲೊಂದು ದೊಡ್ಡ ಸಂಪಿಗೆ ಮರ ಇತ್ತು. ತಲೆಯೆತ್ತಿ ನೋಡುದ್ರೆ ಹೂ ಕಾಣಿಸ್ತಿರಲಿಲ್ಲ.